# <u>ನಮ್ಮಪ್ಪ ಸುಮ್ಮಗಿರೊ ಗೋಪಾಲಾ</u>

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 39.
2. **Note:** This kruti is not there in other standard books that I referred.

ರಾಗ: ಕಲ್ಯಾಣಿ ತಾಳ: ಅಟ

ನಮ್ಮಪ್ಪ ಸುಮ್ಮಗಿರೊ – ಗೋಪಾಲಾ
ಗುಮ್ಮನು ಎಳೆದೊಯ್ವನು ॥ ಪ ॥

ಎಡದ ಕೈಯಲಿ ಕಪಾಲ – ಗೋಪಾಲಾ
ಬಲದ ಕೈಯಲಿ ತ್ರಿಶೂಲ
ಚಳಿಬೆಟ್ಟದ ಹೆಣ್ಣ ಮೈಯೊಳಿಟ್ಟವನಂತೆ
ಅಲೆದು ಸ್ಮಶಾನವ ತಿರುಗುವನಂತೆ ॥ 1 ॥

ಮೂರು ಕಣ್ಣಿನವನೊ – ಗೋಪಾಲಾ
ಐದು ತಲೆಗಳವನೊ
ದಾರಿಯ ಪೋಗುವ ನಾರಿಯನೆಳತಂದು
ಸೇರಿಸಿ ಶಿರದಲ್ಲಿ ಹೊತ್ತನೊ ॥ 2 ॥

ಚಂದ್ರನರ್ಧವ ಪಿಡಿದು – ತಲೆಯ ಮೇಲೆ
ಚೆಂದಕಿಟ್ಟಿರುವನಂತೆ
ಅಂದಗಾರನಂತೆ [ಅನಲ ನೇತ್ರನಂತೆ]
ಮುಂದಿಪ್ಪ ಹುಡುಗನ ಕೊಂದು ತಿಂದವನಂತೆ ॥ 3 ॥

ನಿನ್ನ ಮಗನ ಮಗನೊ – ಗೋಪಾಲಾ
ಪನ್ನಗ ಭೂಷಣನೋ
ಧನ್ಯನಾಗಿ ಶ್ರೀರಾಮ ನಾಮವನು
ಚೆನ್ನಾಗಿ ಚಿಂತಿಪನೊ ॥ 4 ॥

ಕರಿಯಜಿನ ಪೊತ್ತವನೊ – ಗೋಪಾಲಾ

ನೆರೆದ ಭೂತ ತಂದವನೊ
ಶರಧಿಶಯನ ನಿನ್ನ ಚರಣ ಪಂಕಜ ಭೃಂಗ
ಪುರಂದರ ವಿಠಲ ಪನ್ನಂಗ ಶಯನನೆ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗುಮ್ಮ ಬರುವನೆಂದು ಶ್ರೀ ಕೃಷ್ಣನನ್ನು ತಾಯಿ ಹೆದರಿಸಿದಂತೆ ಈ ಹಾಡಿನಲ್ಲಿ ಇದೆ. ಇದರಲ್ಲಿಯ ಗುಮ್ಮ ಶಿವನೆಂಬುದನ್ನು ಇಲ್ಲಿಯ ಬಣ್ಣನೆಯಿಂದ ಅರಿತುಕೊಳ್ಳಬಹುದು.

**ಕಪಾಲ** = ತಲೆಪರಟೆ

**ದೊಡ್ಡ ಬೆಟ್ಟದ ಹೆಣ್ಣು** = ಹಿಮಗಿರಿಯ ಮಗಳು - ಪಾರ್ವತಿ

**ಮೈಯೊಲಿಟ್ಟವನಂತೆ** = ಅರ್ಧನಾರಿ ನಟೇಶ್ವರ

**ಐದು ತಲೆಗಳವನು** = ಸದ್ಯೋಜಾತ, ವಾಮದೇವ, ಅಘೋರ, ಈಶಾನ, ತತ್ಪುರುಷ ಎಂಬ ಐದು ಮೋರೆಗಳುಳ್ಳ ಶಿವ

**ದಾರಿಯ ..... ಹೊತ್ತನು** = ಗಂಗೆ ಶಿವನ ಜಡೆಯಲ್ಲಿರುವಳು

**ಅನಲ ನೇತ್ರ** = ಉರಿಗಣ್ಣು

**ಮುಂದಿಪ್ಪ ........ ತಿಂದವನು** = (ಚಿಲಿಯಾಳನೆ ?)

**ಕರಿಯ ಅಜಿನ** = ಗಜಚರ್ಮ

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** amma, gopala, gumma, shiva, kai, hennu, gange, Parvati, smashana, kannu, Chandra, agni, maga, dhanya, rama, gaja, padma,
**Pravachana:** NA
**Explanation:** NA